(3) ಪ್ರಕಟಣೆ

ಅಧ್ಯಕ್ಷರು:

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ;

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ 21ನೇ ಫೆಬ್ರವರಿ, 1997 ರಂದು ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತೇನೆ.

1. ಕರ್ನಾಟಕ ಕರಾರು ವಾಹನಗಳ (ಅರ್ಜಿನೆ) ತಿದ್ದುಪಡಿ) ವಿಧೇಯಕ, 1997

2. ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 1997.

4. ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಪ್ರತಿಯೊಂದು ಜಿಲ್ಲೆಯಲ್ಲಿ ಕೃಷಿ ಕಾಲೇಜು

106 (844) ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಕೃಷಿ ಸಚಿವರು ಈ ಕೆಳಖಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರತಿ ಜಿಲ್ಲೆಯಲ್ಲಿ ಕೃಷಿ ಕಾಲೇಜುಗಳನ್ನು ಪ್ರಾರಂಭಿಸುವ ಉದ್ದೇಶವಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಜಿಲ್ಲೆಗಳಲ್ಲಿ ಯಾವಾಗ ಆ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು)

ಅ) ಸರ್ಕಾರವು ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಸಂಬಂಧಿಸಿದ ಕೃಷಿ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಒಂದು ಕೃಷಿ ಕಾಲೇಜನ್ನು ಹೊಂದುವ ಉದ್ದೇಶವನ್ನು ಇಟ್ಟುಕೊಂಡಿದೆ.

ಆ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಸ್.ಪಿ. **ಮುದ್ದಹನುಮೇಗೌಡ:** ಮಾನ್ಯ ಅಧ್ಯಕ್ಷರೆ, ಸರ್ಕಾರ ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಸಂಬಂಧಿಸಿದ ಕೃಷಿ ವಿಶ್ವವಿದ್ಯಾನಿಲಯದಡಿಯಲ್ಲಿ ಒಂದು ಕೃಷಿ ಕಾಲೇಜನ್ನು ಹೊಂದುವ ಉದ್ದೇಶವನ್ನು ಇಟ್ಟುಕೊಂಡಿದೆ ಎಂಬ ಉತ್ತರವನ್ನು ಹೇಳಿದ್ದಾರೆ ಬಹಳ ಸಂತೋಷ. ಹಾಗಿದ್ದಲ್ಲಿ ಎಷ್ಟು ಜಿಲ್ಲೆಗಳಲ್ಲಿ ಯಾವಾಗ ಆ ಕಾಲೇಜ್‌ಗಳನ್ನು ಪ್ರಾರಂಭಿಸಲಾಗುವುದು ಎನ್ನುವ ಪ್ರಶ್ನೆಗೆ ಈ ವಿಷಯ ಸರ್ಕಾರದ ಪರಿಸೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಇದು ಆಷ್ಟೊಂದು ತೃಪ್ತಿಕರವಾದ ಉತ್ತರ ಆಗಲಿಲ್ಲ ಆದರೂ ಕೂಡ ತಮ್ಮ ಮುಖಾಂತರ ಮಾನ್ಯ ಕೃಷಿ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ ಸುಮಾರು 70 ಕಿ.ಲೋ.ಮೀಟರ್ ದೂರದಲ್ಲಿರತಕ್ಕ ನನ್ನ ಕ್ಷೇತ್ರವಾದ ಕುಣಿಗಲ್‌ನಲ್ಲಿ ಸುಮಾರು ಒಂದು ಸಾವಿರ ಎಕರೆ ಇರತಕ್ಕಂಥ ಪ್ರದೇಶ ಇದೆ ಅದು ಎಲ್ಲಾ

ಮೂಲಭೂತ ಸೌಕರ್ಯಗಳಿಂದಲೂ ಕೂಡಿದೆ, ಕೃಷಿ ಕಾಲೇಜನ್ನೂ ಸ್ಥಾಪನೆ ಮಾಡಲಿಕ್ಕೆ ಎಲ್ಲಾ ಸವಲತ್ತುಗಳೂ ಸಹ ಅಲ್ಲಿ ಇದೆ. ಮತ್ತೆ ಪ್ರಪಂಚದಲ್ಲಿ ಹೆಸರಾದಂಥ ಒಂದು ಹಾರ್ಸ್ ಬ್ರೀಡಿಂಗ್ ಸೆಂಟರ್ ಕೂಡ ಕುಣಿಗಲ್‌ನಲ್ಲಿ ರುವುದರಿಂದ, ದಯಮಾಡಿ ಸರ್ಕಾರ ಪ್ರತಿ ಜಿಲ್ಲೆಯಲ್ಲಿ ಏನು ಒಂದು ಕಾಲೇಜನ್ನು ಪ್ರಾರಂಭ ಮಾಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿದೆ, ಆ ಕಾಲೇಜನ್ನು ದಯಮಾಡಿ ಕುಣಿಗಲ್‌ನಲ್ಲಿ ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಕೊಟ್ಟಿರುವಂಥ ಇಂಗ್ಲೀಷ್‌ನ ಉತ್ತರಕ್ಕೂ, ಕನ್ನಡದ ಉತ್ತರಕ್ಕೂ ಸ್ವಲ್ಪ ವ್ಯತ್ಯಾಸ ಇದೆ, ಈ ಸಂದರ್ಭದಲ್ಲಿ ಇಂಗ್ಲೀಷನ್ ಉತ್ತರ ಸರಿಯಾಗಿದೆ ಎಂದು ತಮ್ಮ ಗಮನಕ್ಕೆ ಹಾಗೂ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಕನ್ನಡದಲ್ಲಿ ಒಂದು ಕೃಷಿ ಕಾಲೇಜು ಎಂದು ಇದೆ, ಅದು ಸರಿಯಲ್ಲ. ಕೃಷಿ ವಿಶ್ವವಿದ್ಯಾನಿಲಯದ ಒಂದು ಕಾಲೇಜು, ಅದು ಕೃಷಿ ಕಾಲೇಜಾಗಿರಬಹುದು ಅಥವಾ ಪಶು ವೈದ್ಯಕೀಯ ಕಾಲೇಜು ಆಗಬಹುದು, ಬೇರೆ ಬೇರೆ ಕಾಲೇಜುಗಳಾಗಬಹುದು. ಅದನ್ನು ತಿದ್ದುಪಡಿ ಮಾಡಿಕೊಳ್ಳಬೇಕೆಂದು ತಿಳಿಸುತ್ತಾ, ಮತ್ತೆ ಇದು ಪರಿಶೀಲನೆಯಲ್ಲಿದೆ ಎಂಬುದನ್ನು ವಿವರವಾಗಿ ಹೇಳಲಾಗಿದೆ. ಇದರ ಬಗ್ಗೆ ಸರ್ಕಾರದ ಹಣಕಾಸಿನ ವ್ಯವಸ್ಥೆಯನ್ನೂ ಸಹ ನೋಡಬೇಕಾಗುತ್ತದೆ 9ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಗೆ ಹೆಚ್ಚಿನ ಮಹತ್ವವನ್ನು ನೀಡಬೇಕೆಂಬುದು ಕೇಂದ್ರ ಸರ್ಕಾರದ ಒಂದು ಧೋರಣೆಯಾಗಿದೆ. ಅದನ್ನು ನಾವು ಗಣನೆಗೆ ತೆಗೆದುಕೊಂಡು 9ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುವುದಕ್ಕೆ ಮೊದಲೇ ನಾವು ಸಿದ್ಧತೆಗಳನ್ನು ನಡೆಸಬೇಕು ಎಂಬ ದೃಷ್ಟಿಯಿಂದ ಪ್ರತಿ ಜಿಲ್ಲೆಗೆ ಯಾವುದಾದರೂ ಕಾಲೇಜನ್ನು ಸ್ಥಾಪಿಸಬೇಕು ಎಂಬ ಉದ್ದೇಶ ಸರ್ಕಾರಕ್ಕಿದೆ, ಅದಕ್ಕೆ ಹಣಕಾಸಿನ ಲಭ್ಯತೆಯನ್ನು ಅವಲಂಬಿಸಿ ಮುಂದಿನ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಮತ್ತೊಮ್ಮೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಹೆಸರಾಂತ ಹಾರ್ಸ್ ಬ್ರಿಡಿಂಗ್ ಸೆಂಟರ್ ಏನು ಇದೆ, ಅದು ಕುಣಿಗಲ್‌ನಲ್ಲಿರುವುದರಿಂದ ದಯಮಾಡಿ ಮಾನ್ಯ ಕೃಷಿ ಸಚಿವರು ಅನುಕಂಪ ತೋರಿಸಿ ಅದನ್ನು ಉಪಯೋಗಿಸಿಕೊಳ್ಳಬೇಕು, ಏಕೆಂದರೆ ಹಾರ್ಸ್ ಬ್ರೀಡಿಂಗ್ ಸೆಂಟರ್ ಪ್ರಪಂಚದಲ್ಲೆ ಬಹಳ ಹೆಸರುವಾಸಿಯಾಗಿರುವಂತದ್ದು, ಅದಕ್ಕೋಸ್ಕರ ಒಂದು ಪಶುವೈದ್ಯಕೀಯ ಕಾಲೇಜು ಮತ್ತೆ ಕೃಷಿ ಕಾಲೇಜಿಗೂ ಸಹ ಮೂಲಭೂತ ಸೌಕರ್ಯಗಳಿರುವುದರಿಂದ ಮಾನ್ಯ ಸಚಿವರು ದಯಮಾಡಿ ಅದನ್ನು ದಯಪಾಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ: ಒಂದು ಕಾಲೇಜನ್ನು ಸ್ಥಾಪನೆ ಮಾಡಬೇಕಾದರೆ ಒಂದೇ ಅಂಶವನ್ನಲ್ಲದೆ ಎಲ್ಲ ಅಂಶಗಳನ್ನೂ ಗಮನಿಸಬೇಕಾಗುತ್ತದೆ. ಕುದುರೆ ಸಾಕುವುದಕ್ಕೆ ಒಂದು ಕಾಲೇಜು ಅಂದರೆ ಅದು ಸಾಧ್ಯವಿಲ್ಲ. ವೆಟರ್ನರಿಯಲ್ಲಿ ಪಶುಗೆ ಸಂಬಂಧಪಟ್ಟಂತೆ ಎಲ್ಲವೂ ಬರುತ್ತದೆ, ಕುದುರೆ ಬೆಳೆಸುವುದಕ್ಕೆ ಅಥವಾ ಕುದುರೆ ಸಾಕುವುದಕ್ಕೆ ಒಂದು ಕಾಲೇಜು ಮಾಡಬೇಕೆಂಬುದು ಸಾಧ್ಯವಿಲ್ಲ ಎಂಬುದನ್ನು ಮತ್ತೊಮ್ಮೆ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಮತ್ತೆ ಮೊದಲನೆಯ ಪ್ರಶ್ನೆ ಅವರು ಕೇಳಿದ್ದುದು ಏನೆಂದರೆ ಯಾವ ಯಾವ ಜಿಲ್ಲೆ ಎಂದು ಹೇಳುತ್ತಾರೆ, ಈಗ ಯಾವ ಯಾವ ಜಿಲ್ಲೆಯಲ್ಲಿ ಈ ಕಾಲೇಜು ಇರಲಿಲ್ಲವೋ ಆ ಎಲ್ಲಾ ಜಿಲ್ಲೆಗಳಲ್ಲೂ ಹಂತಹಂತವಾಗಿ ಸ್ಥಾಪಿಸಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್: ಮಾನ್ಯ ಅಧ್ಯಕ್ಷರೆ, ಈ ಕೃಷಿ ಕಾಲೇಜಿನಲ್ಲಿ ಕೆಲವು ವಿದ್ಯಾರ್ಥಿಗಳು ಕನ್ನಡದಲ್ಲಿ ಟೀಚಿಂಗ್ ಮಾಡುವುದಿಲ್ಲ ಎನ್ನುವ ದೂರನ್ನು ಹೇಳಿದ್ದರು, ಇದನ್ನು ನಾನು ಮಾನ್ಯ ಮಂತ್ರಿಗಳಿಗೆ ಹೇಳಿದ್ದೆ, ಆ ಹುಡುಗರಿಗೆ ಎಷ್ಟು ತೊಂದರೆಯಾಯಿತು ಎಂದರೆ ಕೊನೆಗೂ ಅವರಿಗೋಸ್ಕರ ಆ ಸಬ್ಜೆಕ್ಟ್ ಇದ್ದರೂ ಕೂಡ ಸೇರಿಸಿಕೊಳ್ಳಲಿಲ್ಲ ಇದರ ಬಗ್ಗೆ ದಯವಿಟ್ಟು ಏನಾದರೂ ಆಲೋಚನೆ ಇದೆಯೇ? ಕೃಷಿಯಲ್ಲಿ ಬರೀ ಇಂಗ್ಲೀಷ್‌ನಲ್ಲಿ ಪಾಠ ಮಾಡುವಂಥ ವ್ಯವಸ್ಥೆ ಇದೆ, ಕನ್ನಡದ ಮಕ್ಕಳಿಗೆ ನೊಗ, ನೇಗಿಲು ಎಲ್ಲಾ ಇಂಗ್ಲೀಷ್‌ನಲ್ಲಿ ಹೇಳಬೇಕೆಂದರೆ, ಬಹಳ ಕಷ್ಟವಾಗುತ್ತದೆ ಆದ್ದರಿಂದ ಅವರು ಏನು ಮಾಡಿದ್ದಾರೆ ಎನ್ನುವುದನ್ನು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಕೆಲವು ವಿದ್ಯಾರ್ಥಿಗಳು ಅಂತ ಅಂದರೆ ಅವರು ಮೊದಲು ಕೃಷಿ ಸಹಾಯಕರಾಗಿದ್ದರು, ಅವರು ಎಸ್.ಎಸ್.ಎಲ್.ಸಿ. ಓದಿರತಕ್ಕಂಥಹವರು. ಅಂತಹವರನ್ನು ಇವರು ಹೈಯರ್ ಎಜುಕೇಷನ್‌ಗೋಸ್ಕರ ಡೆಪ್ಯೂಟ್ ಮಾಡಿದ್ದುದು ನಿಜ. ಅಂತವರು ಕನ್ನಡದಲ್ಲಿ ಕಲಿಯಬೇಕೆನ್ನುವಂಥದ್ದು ಈ ವಿಷಯವಾಗಿ ನನಗೂ ಮನವಿ ಮಾಡಿದರು. ಮಾನ್ಯ ಸದಸ್ಯರು ಕೂಡ ಈ ವಿಚಾರವನ್ನು ಅನೇಕ ಸಾರಿ ತಿಳಿಸಿದ್ದಾರೆ. ಆದರೆ ಕೆಲವು ತಾಂತ್ರಿಕ ಕಾರಣಗಳಿಂದ ಅದನ್ನು ಕನ್ನಡದಲ್ಲಿ ಭೋಧನೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಬೆಂಗಳೂರು ವಿಶ್ವಧ್ಯಾನಿಲಯದಲ್ಲಿ ಕನ್ನಡದಲ್ಲಿ ಭೋಧನೆ ಮಾಡುವಂತಹ ವ್ಯವಸ್ಥೆ ಇದೆ. ಆದರೆ ವಿದ್ಯಾರ್ಥಿಗಳು ನಾವು ಕನ್ನಡದಲ್ಲಿ ಕಲಿಯುತ್ತೇವೆಂದು ಮುಂದೆ ಬರುತ್ತಾ ಇಲ್ಲ. ಈ ಕಾರಣದಿಂದ ಇವತ್ತಿನ ದಿವಸ ಇದು ಸಾಧ್ಯವಾಗುತ್ತಿಲ್ಲವೆನ್ನುವಂತಹ ಮಾತನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು: ನಿಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರನ್ನು ಕೇಳಿದ್ದೀರಿ. ಆದರೆ ಇದು ಸಮಾಜ ಕಲ್ಯಾಣ ಸಚಿವರಿಗೆ ಬರುತ್ತದೆ. ಆದುದರಿಂದ ಇದನ್ನು ಅವರ ಪ್ರಶ್ನೋತ್ತರ ಇದ್ದ ದಿವಸ ತೆಗೆದುಕೊಳ್ಳುತ್ತೇವೆ.

ಪಾಂಡವಪುರದಲ್ಲಿ ಬಸ್ ಸ್ಟಾ ್ಯಂಡ್ ನಿರ್ಮಾಣ.

108 (986) ಶ್ರೀ ಕೆ.ಎನ್.ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಾಂಡವಪುರ ತಾಲ್ಲೂಕಿಗೆ ಬಸ್ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ ಇದುವರೆವಿಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಆ) ಬಸ್ ನಿಲ್ದಾಣವಿಲ್ಲದಿದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?